



ದೂರದಲ್ಲಿ ಹರಿಯುವ ಝರಿಯ ಬಳಿ ಒಟ್ಟಿಗೆ ಹೋಗುವಂತೆ ಸೂಚಿಸಲಾಗಿತ್ತು. ಆ ಝರಿ ರಮಣೀಯವಾಗಿದ್ದು, ಪ್ರಕೃತಿಯ ಮಡಿಲಿನಲ್ಲಿ ಏಕಾಂತ ಸ್ಥಳದಲ್ಲಿ ಹರಿಯುತ್ತಿತ್ತು. ಮಣಿಲಾಲ, ರಾಮದಾಸ, ದೇವದಾಸ ಮತ್ತು ಅವರೊಂದಿಗೆ ಒಮ್ಮೊಮ್ಮೆ ಹತ್ತುಹನ್ನೆರಡು ಜನ ಕಿಶೋರ ಜೊತೆಗಾರರು ಅವರನ್ನು ಹಿಂಬಾಲಿಸುತ್ತಿದ್ದರು. ಅವರಲ್ಲಿ ಮಣಿಲಾಲ ದೊಡ್ಡವನಾಗಿದ್ದು, ಅವನು ಸುಮಾರು ಇಪ್ಪತ್ತು ವರ್ಷದ ವಯಸ್ಸಿನವನಾಗಿದ್ದ.

ಆಶ್ರಮದಲ್ಲಿ ಐದಾರು ವರ್ಷಗಳ ವಯಸ್ಸಿನಿಂದ ಆರಂಭಗೊಂಡು, ಹದಿನೇಳು ಹದಿನೆಂಟು ವಯಸ್ಸಿನ ಆರೇಳು ಜನ ಕಿಶೋರಯುವತಿಯರು ಸಹ ಇದ್ದರು. ಆಶ್ರಮದ ನಿಯಮಾನುಸಾರ ಈ ಕಿಶೋರಿಯರ ಗುಂಪು ನಿತ್ಯ ಒಟ್ಟಿಗೆ ಸ್ನಾನಕ್ಕೆ ಹೋಗುತ್ತಿತ್ತು; ನಿಶ್ಚಿತ ವೇಳೆಯಲ್ಲಿ ಸ್ನಾನಾದಿಗಳನ್ನು ಪೂರೈಸಿ ಆಶ್ರಮದ ಕೆಲಸಗಳಿಗೆ ಮರಳಿ ಬರುತ್ತಿತ್ತು. ಈ ಮಕ್ಕಳು ಪರ್ಯಟನದ ಸಂತಸವನ್ನು ಪಡೆಯುತ್ತಿದ್ದರು, ಮಾತುಕತೆಯಾಡುತ್ತಿದ್ದರು, ತಮಾಷೆಯ ವಿಷಯಗಳನ್ನು ಹಂಚಿಕೊಳ್ಳುತ್ತಿದ್ದರು, ಒಮ್ಮೊಮ್ಮೆ ನೀರಿಗೆ ಧುಮುಕಿ, ಆಡುತ್ತಿದ್ದರು. ಸ್ನಾನದ ಈ ವೇಳೆ ಎಲ್ಲರಿಗೂ ನಿರ್ದೋಷ ಆನಂದ ಮತ್ತು ಪ್ರಸನ್ನತೆಯನ್ನು ತರುವ ಸಮಯವಾಗಿತ್ತು.

ಇವರಲ್ಲಿ ಲಲಿತಾಳ ವ್ಯಕ್ತಿತ್ವ ಬೇರೆ ತೆರನಾಗಿತ್ತು. ಅವಳು ಹದಿನಾರುಹದಿನೇಳರ ಯುವತಿಯಾಗಿದ್ದಳು... ಅವಳ ಕಣ್ಣುಗಳು ಕಾಂತಿಯುಕ್ತವಾಗಿದ್ದವು. ಮಧ್ಯಮ ನಿಲುವಿನ, ತೆಳು ಶ್ಯಾಮಲ ವರ್ಣದ, ಎಲ್ಲರ ದೃಷ್ಟಿ ಸ್ಥಿರವಾಗುವಂಥ ನೀಳ, ಕಪ್ಪು ಮತ್ತು ಸುಂದರ ತಲೆಗೂದಲುಗಳುಳ್ಳ ಲಲಿತಾ ಸದಾ ಹಸನ್ಮುಖಿಯಾಗಿದ್ದು, ಎಲ್ಲರೊಂದಿಗೆ ಕಲೆಯುತ್ತಿದ್ದಳು. ಅವಳು ಅದೆಷ್ಟು ವಾಚಾಳಿಯಾಗಿದ್ದಳೆಂದರೆ, ಅವಳಿದ್ದಂತೆ ಯಾರೂ ಸಹ ಸುಮ್ಮನೆ ಕೂರಲು ಸಾಧ್ಯವಿರಲಿಲ್ಲ. ಅವಳು ಒಂಟಿಯಾಗಿದ್ದರೆ, ಗಾಳಿಯೊಂದಿಗೇ ಹರಟುತ್ತಿದ್ದಳು! ಅವಳು ಮಿತಭಾಷಿ, ಶಾಂತ ಸ್ವಭಾವದ ಮಣಿಲಾಲನಿಗೂ ಸ್ನಾನದ ವೇಳೆಯಲ್ಲಿ ಮಾತನಾಡಲು ವಿವಶಗೊಳಿಸುತ್ತಿದ್ದಳು. ಲಲಿತಾಳ ಈ ಆಕರ್ಷಕ ವ್ಯಕ್ತಿತ್ವದೆದುರು ಮಣಿಲಾಲ ಸಂತಸದಿಂದ ತಲೆದೂಗುತ್ತಿದ್ದ. ಇಪ್ಪತ್ತನಾಲ್ಕು ಗಂಟೆಗಳ ದಣಿವನ್ನು ಲಲಿತಾ ಸ್ನಾನದ ಈ ವೇಳೆಯಲ್ಲಿ ಪರಿಹರಿಸುತ್ತಾಳೆಂದು ಮಣಿಲಾಲನಿಗೆ ಅನ್ನಿಸುತ್ತಿತ್ತು.

ಅಂದು ನಿತ್ಯದಂತೆ ಎಲ್ಲರೂ ಸ್ನಾನಾದಿಗಳಿಂದ ಮುಕ್ತರಾಗಿ, ಬೇರೆಬೇರೆ ದಿಕ್ಕಿನಲ್ಲಿ ನಿಂತು ತಮ್ಮ ತಮ್ಮ ಶರೀರವನ್ನು ಒಣಗಿಸಿಕೊಳ್ಳುತ್ತಿದ್ದರು. ತಣ್ಣನೆಯ ಗಾಳಿಯಿಂದಾಗಿ ಎಳೆ ಬಿಸಿಲು ಹಿತವಾಗುತ್ತಿತ್ತು. ಅನೇಕ ಮಕ್ಕಳು ಈಗಲೂ ನೀರಿಗೆ ಧುಮುಕಿ ಈಜುತ್ತಾ ನೆನೆಯುವ ಆನಂದವನ್ನು ಅನುಭವಿಸುತ್ತಿದ್ದರು. ಲಲಿತಾ ಎಲ್ಲರಿಗಿಂತ ಸ್ವಲ್ಪ ದೂರದಲ್ಲಿ ನಿಂತು, ಬೆನ್ನು ತಿರುಗಿಸಿ ತನ್ನ ನೀಳ, ಒದ್ದೆಯಾದ ಕೇಶವನ್ನು ಹರಡಿ ಒಣಗಿಸಿಕೊಳ್ಳುತ್ತಿದ್ದಳು. ಅವಳು ಒದ್ದೆಯಾದ ಬಟ್ಟೆಗಳಿಂದ ಈಗಲೂ ನೀರು ಹನಿಯುತ್ತಿತ್ತು. ಇನ್ನೂ ನೀರಿನಲ್ಲಿ 'ಛಪಛಪ' ಸದ್ದಿನೊಂದಿಗೆ ಮೀಯುತ್ತಿದ್ದ ಮೂರಾಲ್ಕು ಮಕ್ಕಳನ್ನು ನೀರಿನಿಂದ ಹೊರಗೆ ಕರೆತರಲು ಮಣಿಲಾಲ ನೀರಿಗಿಳಿದಿದ್ದ. ಮಕ್ಕಳು ಲಲಿತಾ ಇದ್ದಲ್ಲಿಗೆ ಬರುತ್ತಿದ್ದರು, ಮಣಿಲಾಲ ಒಬ್ಬ ಬಾಲಕನೊಂದಿಗೆ ಅದೇ ದಿಕ್ಕಿಗೆ ಬಂದ. ಅಕಸ್ಮಾತ್ ಮಣಿಲಾಲನ ದೃಷ್ಟಿ ಬೆನ್ನು ಮಾಡಿ ನಿಂತಿದ್ದ ಲಲಿತಾಳ ಕಡೆಗೆ ಹೊರಳಿತು. ಅವನ ಕಣ್ಣುಗಳು ಅಲ್ಲಿಯೇ ಸ್ಥಿರವಾದವು. ಲಲಿತಾ ಅವನಿಗೆ ಜಲಕನ್ಯೆಯಂತೆ ಕಂಡಳು. ಅವನು ಎವೆಯಿಕ್ಕದೆ ಅವಳನ್ನೇ ನೋಡುತ್ತಾ ನಿಂತ. ಸ್ವಲ್ಪವೇ ದೂರದಲ್ಲಿ ನಿಂತು ಮೂರ್ನಾಲ್ಕು ಬಾಲಕಿಯರು ತನ್ನನ್ನು ನೋಡುತ್ತಿರುವುದು ಅವನ ಗಮನಕ್ಕೇ ಬರಲಿಲ್ಲ.

ಮಣಿಲಾಲನ ನೆರಳು ನೋಡಿದೊಡನೆ ಲಲಿತಾ ಮುಖವನ್ನು ಹೊರಳಿಸಿ ನೋಡಿದಳು. ಮಣಿಲಾಲನನ್ನು ನೋಡಿ ಅವಳು ಲೇಶಮಾತ್ರವೂ ಗಾಬರಿಗೊಳ್ಳಲಿಲ್ಲ. ಮೆಲ್ಲನೆ ನಕ್ಕು, ಮತ್ತೆ ನೆಲವನ್ನು ನೋಡಿದಳು.

'ಲಲಿತಾ...' ಮಣಿಲಾಲ ಈ ಶಬ್ದವೊಂದನ್ನೇ ಹೇಳಲು ಸಾಧ್ಯವಾಯಿತು.

'ಮಣಿಲಾಲ...ನಾನು ಬಟ್ಟೆಗಳನ್ನು ಬದಲಿಸಬೇಕು...' ಗಲ್ಲಗಳಲ್ಲಿ ಮೂಡಿಬಂದ ಕೆಂಬಣ್ಣದಿಂದ ಮತ್ತೂ ಸುಂದರಿಯಾಗಿ ಕಾಣುತ್ತಿದ್ದ ಲಲಿತಾ ತನ್ನ ಕೆಳದುಟಿಯನ್ನು ಕಚ್ಚಿಕೊಂಡಳು.

'ಲಲಿತಾ, ನೀನು ಈ ನೀಳಕೇಶಗಳಲ್ಲಿ ತುಂಬಾ ಸುಂದರಿಯಾಗಿ ಕಾಣುತ್ತಿದ್ದೀಯ.. ಅಪ್ಸರೆಯನ್ನು ನೋಡಿದಂತಾಗುತ್ತದೆ...' ಮಣಿಲಾಲ ತನ್ನ ಮನಸ್ಸಿನಲ್ಲಿ ಮೂಡಿದ ಭಾವನೆಯನ್ನು ವ್ಯಕ್ತಪಡಿಸಿದ.

'ವಾಹ್!' ಲಲಿತಾ ತನ್ನ ಮುಖವನ್ನೆತ್ತಿ ಗಟ್ಟಿಯಾಗಿ ನಕ್ಕಳು, 'ನೀನೆಂದಾದರು ಅಪ್ಸರೆಯ ಹೆಸರನ್ನು ಕೇಳಿದ್ದೀಯ?' ನಂತರ ಅವಳು ತುಂಟತನದ ನಗೆಯನ್ನು ಚೆಲ್ಲುತ್ತಾ ಬೆನ್ನು ಮಾಡಿ ನಿಂತಳು. ಅವಳ ದಟ್ಟ ತಲೆಗೂದಲುಗಳು ಗಾಳಿಯಲ್ಲಿ ಹಾರುತ್ತಿದ್ದವು. ಅಕಸ್ಮಾತ್ ಮಣಿಲಾಲ ಹಾರಾಡುತ್ತಿದ್ದ ತಲೆಗೂದಲುಗಳನ್ನು, ಕೀ ಕೊಟ್ಟ ಆಟಿಕೆಯಂತೆ ಮುಂದೆ ಬಂದು ಸವರಿದ.

ಸ್ವಲ್ಪವೇ ದೂರದಲ್ಲಿ ನಿಂತಿದ್ದ ಇನ್ನಿತರ ಕಿಶೋರಿಯರು ಪಿಳಿಪಿಳಿ ಕಣ್ಣುಗಳನ್ನು ಬಿಡುತ್ತಾ ಈ ಆಕಸ್ಮಿಕ ದೃಶ್ಯವನ್ನು ನೋಡುತ್ತಿದ್ದರು.

ಅಂದು ಎಲ್ಲರೂ ಮರಳಿ ಹೋದಾಗ ಮಣಿಲಾಲ ಮತ್ತು ಲಲಿತಾ ಎಲ್ಲರಿಗಿಂತ ಹಿಂದುಳಿದಿದ್ದರು. ಅವರಿಬ್ಬರು ಆಶ್ರಮಕ್ಕೆ ಹೋದಾಗ ಉಳಿದವರು ತಮ್ಮತಮ್ಮ ಕೆಲಸಗಳಲ್ಲಿ ಮಗ್ನರಾಗಿದ್ದರು. ಏನೂ ಸಂಭವಿಸಿಲ್ಲ ಎನ್ನುವಂತೆ ಮಣಿಲಾಲನೂ ಸಹ ತನ್ನ ಕೆಲಸದಲ್ಲಿ ಮಗ್ನನಾದ.

ಬಹುಶಃ ಈ ವಿಷಯ ಆಶ್ರಮದ ಜೀವನದಲ್ಲಿ ಕೋಲಾಹಲವನ್ನುಂಟು ಮಾಡುತ್ತಿರಲಿಲ್ಲ. ಈ ದೃಶ್ಯವನ್ನು ನೋಡಿದ ಹುಡುಗಿಯರು ತಮ್ಮತಮ್ಮ ತುಟಿಗಳನ್ನು ಹೊಲಿದುಕೊಂಡಂತಿತ್ತು. ಮಣಿಲಾಲ ಮತ್ತು ಲಲಿತಾಳ ವರ್ತನೆಯಲ್ಲಿ ಸಹ ಆ ಒಂದು ಘಟನೆಯನ್ನು ಹೊರತು ಪಡಿಸಿದರೆ, ಬೇರಾವ ಅಸಹಜತೆ ಕಾಣ ಬಂದಿರಲಿಲ್ಲ. ಆ ಕ್ಷಣಗಳು ಅಕಸ್ಮಾತ್ ಮೂಡಿದ್ದು, ಅಕಸ್ಮಾತ್ ಮುಗಿದು ಸಹ ಹೋಗಿತ್ತು. ವಿಷಯ ಅಲ್ಲಿಗೇ ಕೊನೆಗೊಂಡಿತ್ತು. ಮಾರನೆಯ ದಿನ ಸ್ನಾನದ ವೇಳೆಯಲ್ಲಿ ಯಾವುದೇ ವಿಷಯ ಪ್ರಸ್ತಾಪವಾಗಿರಲಿಲ್ಲ, ಆದರೆ ಮೂರ್ನಾಲ್ಕು ದಿನಗಳ ನಂತರ ಘಟಿಸಿದ ಘಟನೆಯಿಂದಾಗಿ, ಅದು ಆಶ್ರಮದ ಜೀವನವನ್ನೇ ಅಲ್ಲಾಡಿಸಿತು.

ಝರಿಯ ಹರಿಯುವ ನೀರಿನಲ್ಲಿ ಸ್ವಲ್ಪ ತಿಳಿವಳಿಕೆಯ ಕನ್ಯೆಯರು ಒಂದು ಭಾಗದಲ್ಲಿ ಸ್ನಾನ ಮಾಡುತ್ತಿದ್ದರು; ಹುಡುಗರು ಇನ್ನೊಂದು ಭಾಗಕ್ಕೆ ಹೊರಟು ಹೋಗುತ್ತಿದ್ದರು. ಇದರಲ್ಲಿ ಯಾವುದೇ ಅಸಹಜ ಅಥವಾ ಹೊಸತು ಇರಲಿಲ್ಲ. ಅದೆಷ್ಟೋ ವೇಳೆ ಈಜುವ ಖುಷಿಯಲ್ಲಿ ಅವರೆಲ್ಲರು ಸ್ವಲ್ಪ ಆಳವಾದ ನೀರಿನಲ್ಲಿ ಮುಂದಕ್ಕೆ ಹೋಗಿ, ಪರಸ್ಪರ ಹತ್ತಿರ ಸಹ ಬರುತ್ತಿದ್ದರು. ಆ ವೇಳೆಯಲ್ಲಿ, ಒಂದಿಬ್ಬರು ಆಶ್ರಮವಾಸಿಗಳು ಮುಳುಗು ಹಾಕಿ ಇನ್ನೊಂದು ಗುಂಪಿನವರ ಮೇಲೆ ನೀರಿನ ಹನಿಗಳನ್ನು ಎರಚುತ್ತಿದ್ದರು. ಲಲಿತಾ ಮತ್ತು ಮಣಿಲಾಲನಿಗೆ ಸಂಬಂಧಿಸಿದ ಘಟನೆ ಘಟಿಸಿದ ನಂತರ, ಮಣಿಲಾಲ ಅಂದು ಸ್ವಲ್ಪ ಆಳದ ನೀರಿನಲ್ಲಿ ಮುಂದಕ್ಕೆ ಹೋಗಿ ಈಜುತ್ತಿದ್ದ. ಅವನ ಗಟ್ಟಿಮುಟ್ಟಾದ ಶರೀರ ನೀರನ್ನು ಸುಲಭವಾಗಿ ಸೀಳುತ್ತಾ ಹೋಗುತ್ತಿತ್ತು.

ಮಣಿಲಾಲ ಸ್ವಲ್ಪ ಆಳದ ನೀರಿನಲ್ಲಿ ಮುಳುಗು ಹಾಕಿ ನೀರಿನ ಇನ್ನೊಂದು ಭಾಗದಿಂದ ಹೊರ ಬಂದು, ಅಲ್ಲಿಂದ ಮುಳುಗು ಹಾಕಿ, ಮೀನಿನಂತೆ ಈಜುತ್ತಿದ್ದ ಲಲಿತಾಳನ್ನು ನೋಡಿದ. ಲಲಿತಾಳ ಇಡೀ ಶರೀರ ನೀರಿನೊಳಗಿತ್ತು, ಆದರೆ ಅವಳ ನೀಳ, ಕಪ್ಪು ಕೇಶಗಳು ನೀರಿನ ಮೇಲ್ಮೈಯಲ್ಲಿ ಹರಡಿ ಅದ್ಭುತ ದೃಶ್ಯವನ್ನು ಮೂಡಿಸುತ್ತಿತ್ತು. ಈಗ್ಗೆ ಮೂರ್ನಾಲ್ಕು ದಿನಗಳ ಹಿಂದೆ ಮಣಿಲಾಲ ಲಲಿತಾಳ ಗಾಳಿಯಲ್ಲಿ ಹಾರುತ್ತಿದ್ದ ಅವಳ ಒದ್ದೆಯಾದ ಕೇಶರಾಶಿಯನ್ನು ಸ್ಪರ್ಶಿಸಿದ್ದ. ಈಗ ಅದೇ ಕೇಶರಾಶಿ ನೀರಿನ ಪ್ರವಾಹದಲ್ಲಿ ಮತ್ತೂ ಅದ್ಭುತವಾದ ದೃಶ್ಯವನ್ನು ಮೂಡಿಸುತ್ತಿದ್ದವು; ಅದನ್ನು ನೋಡಿ ಮಣಿಲಾಲನ ಮನಸ್ಸು ಉದ್ವೇಗಕ್ಕೊಳಗಾಗಿತ್ತು.

ನೀರಿನ ಮೇಲ್ಮೈಯಲ್ಲಿ ಹರಿಯುವ ಲಲಿತಾಳ ತಲೆಕೂದಲುಗಳು ಹಾಗೂ ಈ ಕೂದಲುಗಳ ಕೆಳಗೆ ಅಲೆಗಳಲ್ಲಿ ವಕ್ರವಾಗುತ್ತಿದ್ದ ಲಲಿತಾಳ ದೇಹ ಸೌಂದರ್ಯ...

ಮಣಿಲಾಲ ಮತ್ತೆ ಲಲಿತಾಳ ಕೇಶರಾಶಿಯನ್ನು ನೇವರಿಸಿದ. ಆದರೆ ನೀರಿನಲ್ಲಿನ ಮಣಿಲಾಲನ ನೆರಳು ಸಂಜ್ಞೆಯೊಂದನ್ನು ಮಾಡಿದಂತೆ, ಆ ಕನ್ಯೆ ವೇಗವಾಗಿ ತಲೆಯನ್ನಾಡಿಸಿ, ಮುಖವನ್ನು ಹೊರಗೆ ತಂದಳು. ಮಣಿಲಾಲ ಅಲ್ಲಿಯೇ ಕದಲದೆ ನಿಂತ. ಅದು ಲಲಿತಾ ಆಗಿರದೆ, ಲಲಿತಾಳಂಥ ಕೇಶರಾಶಿಯ, ಅವಳಷ್ಟೇ ಸುಂದರಿಯಾಗಿದ್ದ ಆಶ್ರಮಕನ್ಯೆ ಚಂದಾ ಆಗಿದ್ದಳು! ಚಂದಾ ಮಣಿಲಾಲನನ್ನು ನೋಡಿದಳು. ಅವಳ ತುಟಿಗಳು ಕಂಪಿಸಿದವು. ಮುಖದಲ್ಲಿ ಗಾಬರಿ ಮೂಡಿತು. ಅಂದು ಲಲಿತಾಳ ಸಮೀಪದಲ್ಲಿ ನಿಂತಿದ್ದ ಮಣಿಲಾಲನನ್ನು ಚಂದಾ ತನ್ನ ಕಣ್ಣಾರೆ ನೋಡಿದ್ದಳು. ಆಗ ಅವಳು ತುಟಿ ಬಿಚ್ಚಿರಲಿಲ್ಲ, ಆದರೆ ಇಂದು ಮಣಿಲಾಲ ಯಾವ ದೃಷ್ಟಿಯಲ್ಲಿ ಅವಳನ್ನು ನೋಡಿದ್ದನೋ...ಯಾವ ರೀತಿಯಲ್ಲಿ